ಮರುಕಳಿಕೆ

# ಮದ್ರಾಸ್ ಕನ್ನಡಿಗನ ಕಾದಂಬರಿ ಪ್ರೇಮಾವತಿ



**ಬಿ. ಜನಾರ್ದನ ಭಟ್**

'ಚಂದಮಾಮ' ಪತ್ರಿಕೆಯ ಕನ್ನಡ ಆವೃತ್ತಿಯ ಸಂಪಾದಕರಾಗಿ ಮದ್ರಾಸಿನಲ್ಲಿಯೇ ನೆಲೆಸಿದ್ದ, ಅಲ್ಲಿಯೇ ಕನ್ನಡ ಬರವಣಿಗೆಯನ್ನು ಪ್ರಾರಂಭಿಸಿ ಬೆಳೆಸಿಕೊಂಡ ಕನ್ನಡದ ವಿಶಿಷ್ಟ ಕಾದಂಬರಿಕಾರ, ಕತೆಗಾರ ಮತ್ತು ಮಕ್ಕಳ ಕಥೆಗಳ ಸರದಾರ ನವಗಿರಿನಂದ. 1966 ರಲ್ಲಿ ಪ್ರಕಟವಾದ 'ಪ್ರೇಮಾವತಿ' ಅವರ ಉತ್ತಮ ಕಾದಂಬರಿಗಳಲ್ಲಿ ಒಂದು. ಕೆಲವು ಪತ್ತೇದಾರಿ ಕಾದಂಬರಿಗಳನ್ನೂ, ಐತಿಹಾಸಿಕ ಕಾದಂಬರಿಗಳನ್ನೂ ಬರೆದಿರುವ ನವಗಿರಿನಂದ ಸಾಮಾಜಿಕ ಕಾದಂಬರಿಗಳನ್ನು ಹೆಚ್ಚಾಗಿ ಬರೆದಿದ್ದಾರೆ. ಕೆಲವು ಪತ್ತೇದಾರಿ ಕಾದಂಬರಿಗಳನ್ನೂ, ಐತಿಹಾಸಿಕ ಕಾದಂಬರಿಗಳನ್ನೂ ಬರೆದಿರುವ ನವಗಿರಿನಂದ 1948 ರಲ್ಲಿ ತಮ್ಮ 'ಇಂದ್ರಜಾಲ' ಕಾದಂಬರಿಗೆ ಮದ್ರಾಸು ಸರ್ಕಾರದ ಬಹುಮಾನ ಪಡೆದಿದ್ದರು. ಒಟ್ಟು 40 ಕಾದಂಬರಿಗಳನ್ನು ಅವರು ಪ್ರಕಟಿಸಿದ್ದಾರೆ.

ಅವರ 'ಪ್ರೇಮಾವತಿ', 'ನತದೃಷ್ಟೆ' ಮುಂತಾದ ಸಾಮಾಜಿಕ ಕಾದಂಬರಿಗಳು 1940 ರಿಂದ 1960ರ ದಶಕದವರೆಗೆ ಸುಮಾರು ಮೂರು ದಶಕಗಳಲ್ಲಿ ಕನ್ನಡದಲ್ಲಿ ಸೃಷ್ಟಿಯಾದ ಭಾವಪ್ರಧಾನವಾದ ಅಭಿಜಾತ ಶೈಲಿಯನ್ನು ಅನುಸರಿಸಿವೆ. ಆ ಶೈಲಿಯಲ್ಲಿ ಮಿರ್ಜಿ ಅಣ್ಣಾರಾಯರು, ಬೆಳ್ಳೆ ರಾಮಚಂದ್ರರಾಯರು, ವ್ಯಾಸರಾಯ ಬಲ್ಲಾಳರು (ಪ್ರಾರಂಭದ ಕಾದಂಬರಿಗಳು) ಬರೆದು ಜನಪ್ರಿಯರಾಗಿದ್ದರು. ಪ್ರಗತಿಶೀಲರೂ ಆಗಿ ಜತೆ ಜತೆಗೇ ಬರೆಯುತ್ತಿದ್ದರೂ ಅಭಿಜಾತ ಶೈಲಿಯ ಭಾವಪ್ರಧಾನ ಕಾದಂಬರಿಕಾರರು ಮಾನವೀಯ ಮುಖಗಳ ಚಿತ್ರಣವನ್ನೂ ಮನೋಲೋಕದ ಪರಿಶೀಲನೆಯನ್ನೂ ಮಾಡಿರುವುದರಿಂದ ಇವರನ್ನು ಪ್ರತ್ಯೇಕವಾಗಿ ಗುರುತಿಸುವುದು ಸೂಕ್ತ.

'ಪ್ರೇಮಾವತಿ' ಕಾದಂಬರಿ ನಗರದ ಬದುಕು ಹಾಗೂ ಆಧುನಿಕತೆಯ ಆಕರ್ಷಣೆಯಿಂದಾಗಿ ಮಧ್ಯಮ ವರ್ಗದ ಯುವ ಜನಾಂಗದವರು ದಾರಿ ತಪ್ಪುತ್ತಿರುವ ಕಥೆಯನ್ನು ಹೇಳುವ ಕಾದಂಬರಿ. ಕಥೆ ನಡೆಯುವ ಕೇಂದ್ರಗಳು ನಾಲ್ಕು. ಮಂಗಳೂರಿನಿಂದ